**ದಿಃ12.01.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಎ ಎನ್ ವಕೀಲರಿಂದಃ**

1 ನೇ ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ಕಾನೂನು ಬದ್ಧ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. 1 ಪ್ರತಿವಾದಿಯ ತಂದೆ ಬೆಳ್ಳಿಯಪ್ಪ ಅವರಿಂದ ಬಂದ ಪಿತ್ರಾರ್ಜಿತ ಸ್ವತ್ತುಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳನ್ನು ಮಾತ್ರ ಈ ಕೇಸಿನಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಎಲ್ಲಾ ಆಸ್ತಿಗಳನ್ನು ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ನನಗೆ ಕವಿತ ಎಂದು ಕರೆಯುತ್ತಾರೆ ಎಂದರೆ ಸರಿ. ಸರ್ವೆ ನಂ.149/8 ವಿಸ್ತೀರ್ಣ 1 ಎಕರೆ 23 ಸೆಂಟ್ ಕವಿತಾ ಪಳಂಗಪ್ಪ ಎಂಬ ಹೆಸರಿನಲ್ಲಿರುವ ಆಸ್ತಿ ನನಗೆ ಸೇರಿದಲ್ಲ. ನನ್ನ ಗಂಡ 1985 ರಿಂದ 2003 ರವರೆಗೆ ಆರ್ಮಿಯಲ್ಲಿ ಕೆಲಸ ಮಾಡಿದ್ದಾರೆ ಎಂದರೆ ಸರಿ. ನನ್ನ ಗಂಡನ ತಮ್ಮ ಅಂದರೆ 2 ನೇ ಪ್ರತಿವಾದಿ ಹೊರ ರಾಜ್ಯದಲ್ಲಿ ಉದ್ಯೋಗದಲ್ಲಿ ಇದ್ದರು ಎಂದರೆ ಸರಿ. 3 ನೇ ಪ್ರತಿವಾದಿ ಅವರ ತಂದೆಯ ಜೊತೆ

ವ್ಯವಸಾಯ ಮಾಡಿಕೊಂಡು ಊರಿನಲ್ಲಿ ಇದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾವು ಸಹಿತ ವ್ಯವಸಾಯ ಮಾಡುತ್ತಿದ್ದೇವೆ. ನನ್ನ ಗಂಡ ತೀರಿಕೊಂಡ ನಂತರ ಸರ್ಕಾರದಿಂದ ಬರುವ ಎಲ್ಲಾ ಸೌಲಭ್ಯಗಳನ್ನು ನಾನು ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಬಂದ ಹಣದಲ್ಲಿ ನನ್ನ ಅತ್ತೆ ಮಾವನಿಗೆ ನಗದಾಗಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಸರ್ಕಾರದಿಂದ ಬಂದಿರುವ ಸಂಪೂರ್ಣ ಹಣವನ್ನು ನಾನೆ ಪಡೆದುಕೊಂಡಿದ್ದೇನೆ, ನನ್ನ ಅತ್ತೆ ಮಾವನಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಐಟಮ್ 1 ರ ಆಸ್ತಿ ನಮ್ಮ ಕುಟುಂಬದ ಹಿರಿಯ ಸದಸ್ಯರಿಗೆ 1939 ರಲ್ಲಿ ಸರ್ಕಾರದಿಂದ ಮಂಜೂರಾಗಿದೆ ಎಂದು ನನ್ನ ಮುಖ್ಯವಿಚಾರಣೆಯಲ್ಲಿ ನಮೂದಿಸಲಾಗಿದೆ, ಆದರೆ ಯಾರ ಹೆಸರಿಗೆ ಮಂಜೂರಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಜಾಗವು 1 ನೇ ಪ್ರತಿವಾದಿಯ ತಂದೆಗೆ ಸರ್ಕಾರದಿಂದ 1939 ರಲ್ಲಿ ಮಂಜೂರಾದ ಜಾಗ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಯ ತಂದೆ ಕ್ರಯ ಪತ್ರದ ಮೂಲಕ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಸದರಿ ಆಸ್ತಿ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನನ್ನ ಗಂಡನಿಗಾಗಲಿ ನನ್ನ ಮಕ್ಕಳಿಗಾಗಲಿ ಸದರಿ ಆಸ್ತಿಯಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಮ್ 2 ಸರ್ವೆ ನಂ.149/5 2.64 ಎಕರೆ ಗಳು 1 ನೇ ಪ್ರತಿವಾದಿ 2 ಕ್ರಯ ಪತ್ರಗಳ ಅಡಿಯಲ್ಲಿ ಖರೀದಿ ಮಾಡಿರುವ ತನ್ನ ಸ್ವಯಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಸದರಿ ಆಸ್ತಿಯಲ್ಲೂ ನಮಗೆ ಯಾವುದೆ ಹಕ್ಕು ಪ್ರಾಪ್ತಿ ಇಲ್ಲ ಎಂದರೆ ಸರಿಯಲ್ಲ.

ದಾವಾ ಐಟಮ್ 3 ರ ಸರ್ವೆ ನಂ.149/18 ಪಿ 1 0.50 ಎಕರೆ ಆಸ್ತಿಯನ್ನು 1 ನೇ ಪ್ರತಿವಾದಿ ಮತ್ತು ಅವರ ಇಬ್ಬರು ಸಹೋದರರಾದ ಬೋಜಪ್ಪ ಮತ್ತು ಪೊನ್ನಪ್ಪ ಇವರು ಜಂಟಿ ಹೆಸರಿನಲ್ಲಿ ಖರೀದಿ ಮಾಡಿರುವ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರಗಳನ್ನು ನಾನು ನೋಡಿದ್ದೇನೆ. ದಾವಾ ಐಟಮ್ 4 ಮತ್ತು 5 ಸ್ವತ್ತುಗಳು 1 ನೇ ಪ್ರತಿವಾದಿಗೆ ಸರ್ಕಾರದಿಂದ 1953 ರಲ್ಲಿ ಮಂಜೂರಾದಂತ ಜಾಗ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಆಸ್ತಿಗಳು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಐಟಮ್ 1 ರಿಂದ 3 ನ್ನು 1 ನೇ ಪ್ರತಿವಾದಿ ತನ್ನ ಸ್ವಂತ ಹಣದಿಂದ ಖರೀದಿ

ಮಾಡಿರುವ ಆಸ್ತಿಗಳು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವ ಆಸ್ತಿಗಳು ಎಂದು ನುಡಿಯುತ್ತಾರೆ. ದಾವಾ ಐಟಮ್ 4 ಮತ್ತು 5 1ನೇ ಪ್ರತಿವಾದಿಯ ವೈಯಕ್ತಿಕ ಹೆಸರಿಗೆ ಮಂಜೂರಾದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಖರೀದಿ ಮಾಡಲು 1ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯ ಆದಾಯ ಇರಲಿಲ್ಲ, ಆದರೆ ನನ್ನ ಗಂಡ ಆರ್ಮಿಯಲ್ಲಿದ್ದಾಗ ಅವರ ಆದಾಯವನ್ನು ನೀಡಿದ್ದಾರೆ. ನನ್ನ ಗಂಡನ ಆದಾಯವು ಆಸ್ತಿಯ ಖರೀದಿಗಾಗಿ ವಿನಿಯೋಗ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡಾಗ ಅವರಿಗೆ 32 ವರ್ಷ ವಯಸ್ಸಾಗಿತ್ತು. 1ನೇ ಪ್ರತಿವಾದಿ ಸದರಿ ಆಸ್ತಿಗಳನ್ನು ಖರೀದಿ ಮಾಡಿದ ಸಮಯದಲ್ಲಿ ನನ್ನ ಗಂಡ ಜನಿಸಿರಲಿಲ್ಲ, ಮತ್ತು ಕೆಲವು ಆಸ್ತಿಗಳು ಖರೀದಿ ಮಾಡಿದಾಗ ನನ್ನ ಗಂಡನಿಗೆ ಯಾವುದೆ ಆದಾಯವಿರಲಿಲ್ಲ. 1ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯ ಆದಾಯದಿಂದ ಸದರಿ ಆಸ್ತಿಗಳನ್ನು ಖರೀದಿ ಮಾಡಿ ಅಭಿವೃದ್ಧಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ನಾನೇ ಸ್ವತಃ ನನ್ನ ಅತ್ತೆ ಮಾವನ ಮನೆಯನ್ನು ಬಿಟ್ಟು ಬೇರೆ ಕಡೆ ವಾಸವಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಮ್ 6 ಗದ್ದೆ ಜಮೀನು ಎಂದರೆ ನನಗೆ ಗೊತ್ತಿಲ್ಲ. ಆದರೆ ಈಗಲೂ ನಮ್ಮ ಮಾವ ಮತ್ತು ಅವರ ಅಣ್ಣ ತಮ್ಮಂದಿರ ಹೆಸರಿನಲ್ಲಿ ಜಂಟಿಯಾಗಿದೆ ಎಂದರೆ ಸರಿ. ನಮ್ಮ ಜಂಟಿ ಕುಟುಂಬದ ಆಸ್ತಿ ದಾವಾ ಐಟಮ್ 6 ಮಾತ್ರ ಇದ್ದು, ಅದರಲ್ಲಿ ಮಾತ್ರ ಎಲ್ಲರಿಗೂ ಭಾಗ ಆಗಬೇಕು ಎಂದರೆ ಸರಿಯಲ್ಲ. ಸದರಿ ದಾವಾ ಐಟಮ್ 6 ರಲ್ಲಿ ಹಕ್ಕು ಇರುವ ಎಲ್ಲರನ್ನು ಈ ದಾವೆಯಲ್ಲಿ ಪಕ್ಷಕರರಾಗಿ ಮಾಡಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ ಜೀವಿತ ಕಾಲದಲ್ಲಿ ಸ್ವಂತ ಖರ್ಚಿಗೆ ಮರಗಳನ್ನು ಕಡೆದು, ಮಾರಾಟ ಮಾಡಿದ್ದು, ನಮಗೆ ಅದರಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ನನ್ನ ಗಂಡ ಬದುಕಿರುವಾಗಿ 2 ನಿವೇಶನಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ನನ್ನ ಗಂಡನ ಪಾತ್ರ ಯಾವುದೆ ರೀತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಮ್ 4 ಮತ್ತು 5 ಸರ್ಕಾರದಿಂದ 1ನೇ ಪ್ರತಿವಾದಿಗೆ ಮಂಜೂರಾಗಿದ್ದು, ಸದರಿ ಆಸ್ತಿಯಲ್ಲಿ ನನ್ನ ಮಕ್ಕಳಿಗೆ ಯಾವುದೆ ಹಕ್ಕು ಇಲ್ಲ ಎಂದರೆ

ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ.ಇದೆ.

ಸಹಿ/-

(ರೂಪ ಕೆ)

ಹಿರಿಯ ಸಿವಿಲ್ ನ್ಯಾಯಾಧೀಶರು,

ಕೊಡಗು, ಮಡಿಕೇರಿ.